ಆಕರ್ಷಕ ನಗುವಿಗೆ ಸಾಲದ ಹಲ್ಲುಗಳ ಅವಶ್ಯಕತೆ ಇಲ್ಲ ಎಂಬುದನ್ನು ನಿರೂಪಿಸುವಂತಿದ್ದ. 'ನಗುವನ್ನು ನೋಡಿ ಯಾರೆಂದು ತಿಳಿದುಕೊಳ್ಳಲು ಸಾಧ್ಯವೇ?'

ಇವನು ತಮಿಳು ಮಾತನಾಡುವವನೆಂದು ಅವನ ಇಂಗ್ಲಿಷ್ ಹೇಳಿತು. ಬೇರೆಯ ಊರು. ಖಂಡಿತ ಹೋಟೆಲಿನ ಆಸಾಮಿ ಅಲ್ಲ. ಅದೇ ಸೆಮಿನಾರಿಗೆ ಬಂದವನಲ್ಲ. ನನ್ನ ಮನಸ್ಸನ್ನು ಓದಿದವನಂತೆ, "ಒಳ್ಳೆಯ ವೆದರ್ ಇವತ್ತು. ಹೆದರುತ್ತಲೇ ಬಂದೆ ಈ ಊರಿನ ಬಿಸಿಲಿಗೆ..."

ನಾನು ಕೇಳದೇನೇ ಮೂರು ವಿಷಯಗಳು ತಿಳಿದವು. ಮೆಲ್ಲಗೆ ನಗುತ್ತಾ 'ಹೌದು' ಎಂಬಂತೆ ತಲೆಯಾಡಿಸಿದೆ.

"ನನಗೆ ಪ್ರೋಗ್ರಾಮ್ ಶುರುವಾಗಲು ಇನ್ನೂ ಒಂದು ಗಂಟೆ ಇದೆ. ನಿಮಗೆ?"

ಬೇರೆ ಸೆಮಿನಾರ್ ಎಂಬ ನಾಲ್ಕನೆ ವಿಷಯವೂ ತಿಳಿಯಿತು.

ಹಿಂದೂ ಮುಂದೂ ತಿಳಿಯದವರ ಬಳಿ ಹೇಗೆ ಮಾತನಾಡುವುದು? ಹೆಣ್ಣಿಗೆ ಇರುವ ಆತ್ಮರಕ್ಷಣೆಯ ಅಲಾರಾಮ್ ನನ್ನ ತಲೆಯೊಳಗೆ ಹೊಡೆಯಲು ತೊಡಗಿತು; ಸ್ವ ಇಚ್ಛೆಯಿಂದ.

"ಕುಳಿತುಕೊಳ್ಳಬಹುದೇ?'' ಕುರ್ಚಿಯನ್ನು ಎಳೆಯುತ್ತಲೇ ಕೇಳಿದ.

ಬೇಡ ಎಂದು ಹೇಗೆ ಹೇಳುವುದು ಎಂದು ಯೋಚಿಸಿ ಮುಗಿಸುವುದರೊಳಗೇ ಕುಳಿತುಬಿಟ್ಟ ಎದುರಿನಲ್ಲಿ.

ಕಾಫಿ ನೀಡಿ ಅವನು, "ಕೆಪ್ಪೋಚ್ಚಿನೋ?" ಅಂದ.

"ನೋ ಥ್ಯಾಂಕ್ಸ್" ಎಂದೆ.

"ನಿಮ್ಮ ಪ್ರೋಗ್ರಾಮ್ ಎಷ್ಟು ಗಂಟೆಗೆ ?" ಎರಡನೇ ಸಲ ಕೇಳಿದ.

"ಇನ್ನು ಹದಿನೈದು ನಿಮಿಷ ಇದೆ."

"ಓ ಆ ಕಂಪನಿಯಾ?" ಎಂದು ಕಂಪನಿಯ ಹೆಸರು ಹೇಳಿದ.

"ಹೌದು..."

"ನೀವು ಏನಾಗಿದ್ದೀರಿ ಅಲ್ಲಿ?"

"ಗುಡಿಸಿ ಸಾರಿಸೋ ಕೆಲಸ" ಅಂತ ಹೇಳಬೇಕೆಂದುಕೊಂಡೆ. ಹಿಂದುಮುಂದು ತಿಳಿಯದ ಒಬ್ಬರ ಬಳಿ ವೈಯಕ್ತಿಕ ವಿವರಗಳನ್ನು ಕೇಳಲು ಹೇಗೆ ಸಾಧ್ಯ ಇವರಿಂದ?

"ಯಾತಕ್ಕೆ ಕೇಳ್ತಾ ಇದ್ದೀರಾ?" ಎಂದೆ. ಆದರೂ, ಯಾವ ಉದ್ದೇಶದಿಂದ ಹಿಂದುಮುಂದು ತಿಳಿಯದ ಇವನೊಂದಿಗೆ ಯಾಕೆ ಮಾತನಾಡುತ್ತಿದ್ದೇನೆ? ಎಂದು ಒಳಮನಸ್ಸು ಕೇಳಿತು.

"ಅಲ್ಲಾ, ಇದೆ ಊರಿನವರು ನೀವು! ಯಾಕೆ ಇಷ್ಟು ಬೇಗ ಬಂದಿರಿ?"

ನಾನು ಯಾವಾಗ ಬಂದರೆ ಇವನಿಗೇನು? ಅಂದುಕೊಂಡೆ. ಆದರೆ, ಹೇಳಲಿಲ್ಲ. ಬುದ್ಧಿ ತಿಳಿಯಾಗಿ ಯೋಚಿಸುವಷ್ಟು ಬಾಯಿ ಸಹಕರಿಸಲು ನಿರಾಕರಿಸಿತು.

"ಟ್ರಾಫಿಕ್ಕಿಗೆ ಹೆದರಿ ಮನೆಯಿಂದ ಬೇಗನೆ ಹೊರಟುಬಿಟ್ಟೆ."

"ಅಯ್ಯೋ ಚೆನ್ನೈಯಲ್ಲಿ ಇದು ಒಂದು ದೊಡ್ಡ ಸಮಸ್ಯೆ..." ಎಂದ, ತಕ್ಷಣದ ಉತ್ತರ ಎಂಬಂತೆ.

ಬಹಳ ಊರು ಸುತ್ತಿರುವವನಂತೆ ಕಾಣುತ್ತೆ ಎಂದು ಅಂದುಕೊಂಡೆ. "ಹೌದು, ಮೆಟ್ರೊ ರೈಲು ಕೆಲಸ ನಡೆಯುತ್ತಿದೆಯಲ್ಲಾ..." ಎಂದು ಸಂಬಾಳಿಸಿದೆ.

"ಅದಲ್ಲದೆ ಕಾರು – ಬೈಕ್ ಎಲ್ಲಾ ತುಂಬಾನೇ ಜಾಸ್ತಿ ಆಗಿದೆ ಚೆನ್ನೈನಲ್ಲಿ" ಎಂದು ನನ್ನನ್ನು ಸಮಾಧಾನಪಡಿಸುವಂತೆ ಹೇಳುವಾಗ, 'ಬೆಳಗ್ಗೆ ಬೆಳಗ್ಗೆ ಇವನ ಜತೆ ಯಾಕೆ ಟ್ರಾಫಿಕ್ ರಾಮಸ್ವಾಮಿ ತರಾ ಮೊಂಡುವಾದ ಮಾಡಬೇಕಿದೆ?' ಎಂದು ಅಂದುಕೊಂಡರೂ, ನನಗೆ